ಪಾಪ ಕ್ಷಮಾಪಣೆ :

ಪಾಲಕ : ಪ್ರೀತಿಸ್ವರೂಪನಾದ ದೇವರು ತಾನೇ, ನಾವು ಹಿಂತಿರುಗಿ ಆತನ ಬಳಿಗೆ ಬರುವಂತೆ ನಮ್ಮ ಪಾಪಗಳನ್ನು ಕ್ಷಮಿಸಲಿ ಮತ್ತು ಯೇಸುಕ್ರಿಸ್ತನ ಮೂಲಕ ಆತನು ಶಾಶ್ವತವಾದ ಪ್ರೀತಿಯನ್ನು ನಮಗೆ ಅನುಗ್ರಹಿಸಲಿ. ಆಮೆನ್

ವೇದ ಪಾರಾಯಣ : 1. ಹಳೆ ಒಡಂಬಡಿಕೆ

2. ಪತ್ರಿಕಾ ಪಾರಾಯಣ

3. ಸುವಾರ್ತಾ ಪಾರಾಯಣ

ಸಂಗೀತ/ವಿಶೇಷ ಗೀತೆ :

ಪ್ರಸಂಗ :

ಅಪೊಸ್ತಲರ ವಿಶ್ವಾಸ ಸೂತ್ರ :

ಕಾಣಿಕೆ ಸಂಗ್ರಹ : ಸಂಕೀರ್ತನೆ

ಕಾಣಿಕೆ ಸಮರ್ಪಣ ಪ್ರಾರ್ಥನೆ :

ಪರಾರ್ಥ ಪ್ರಾರ್ಥನೆ : (ನಮ್ಮ ಸಭೆ, ಸಭಾಪ್ರಾಂತ, ರಾಜ್ಯ, ದೇಶ ಮತ್ತು ಈ ಲೋಕದ ಅಗತ್ಯತೆಗಳಿಗಾಗಿ)

ಪಾಲಕ : ಕರುಣೆಯುಳ್ಳ ದೇವರೇ, ನಿನ್ನ ಮಗನಾದ ಯೇಸು ಕ್ರಿಸ್ತನ ಮೂಲಕ ನೀನು ನಿನ್ನ ಜನರನ್ನು ನಿನ್ನೊಂದಿಗೆ ಸಂಧಾನ ಮಾಡಿಕೊಂಡಿದ್ದೀ.

ಸಭೆ : **ಆತನ ಪ್ರಾರ್ಥನೆ ಮತ್ತು ಉಪವಾಸಗಳನ್ನು ಅನುಸರಿಸುವುದರ ಮೂಲಕ ನಾವು ಸಮರ್ಪಣೆಯ ಮನಸ್ಸಿನಿಂದ ನಿನಗೆ ವಿಧೇಯರಾಗುವಂತೆ ಮತ್ತು ಪರಿಶುದ್ಧ ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡುವಂತೆ ನಮ್ಮನ್ನು ಬಲಪಡಿಸೆಂದು ಯೇಸು ಕ್ರಿಸ್ತನ ಮೂಲಕ ಬೇಡಿಕೊಳ್ಳುತ್ತೇವೆ. ಆಮೆನ್**

ಮುಕ್ತಾಯದ ಸಂಗೀತ :

ಕರ್ತನ ಪ್ರಾರ್ಥನೆ :

ದೈವಾಶೀರ್ವಾದ :

ಪಾಲಕ : ಕರ್ತನು ನಿಮ್ಮನ್ನು ಆಶೀರ್ವದಿಸಿ ಕಾಪಾಡಲಿ; ಕರ್ತನು ಪ್ರಸನ್ನ ಮುಖದಿಂದ ನಿಮ್ಮನ್ನು ನೋಡಿ ನಿಮ್ಮ ಮೇಲೆ ದಯವಿಡಲಿ; ಕರ್ತನು ನಿನ್ನ ಮೇಲೆ ಕೃಪಾಕಟಾಕ್ಷವಿಟ್ಟು ನಿಮಗೆ ಶಾಂತಿಯನ್ನು ಅನುಗ್ರಹಿಸಲಿ. ಆಮೆನ್

ಬೂಧಿ ಬುಧವಾರದ ಆರಾಧನಾ ಕ್ರಮ

6ನೇ ಮಾರ್ಚ್ 2019

ಆರಾಧನೆಗೆ ಕರೆ :

ಪಾಲಕ : ಕರ್ತನು ನಿಮ್ಮೊಂದಿಗಿರಲಿ.

ಸಭೆ : **ನಿನ್ನಾತ್ಮದೊಂದಿಗೂ ಇರಲಿ.**

ಪ್ರಾರ್ಥನೆ :

ಎಲ್ಲರೂ : ದೇವರೇ, ನಿನ್ನ ವಾಕ್ಯ ನಾವು ಕೇಳುವುದಕ್ಕೂ ನಮ್ಮ ಪಾಪಗಳನ್ನು ಅರಿಕೆ ಮಾಡುವುದಕ್ಕೂ ನೀನು ನಮಗೆ ಕೊಟ್ಟಿರುವ ಕರೆಗೆ ನಾವು ಯೋಗ್ಯರಾಗಿ ಜೀವಿಸುವಂತೆ, ನಮ್ಮ ನಂಬಿಕೆಯಲ್ಲಿ ನಮ್ಮನ್ನು ಬಲಪಡಿಸೆಂದು ನಿನ್ನಲ್ಲಿ ಬಿನ್ನವಿಸುವುದಕ್ಕಾಗಿ, ಶ್ರಮ–ಮರಣಗಳ ಆರಂಭದ ಈ ಪವಿತ್ರ ಬೂಧಿ ಬುಧವಾರದ ಆರಾಧನೆಯಲ್ಲಿ ನಿನ್ನ ಬಳಿಗೆ ನಾವು ಬರುತ್ತೇವೆ. ಆಮೆನ್

ಆರಂಭದ ಸಂಗೀತ :

ಉತ್ತರ ಪ್ರತ್ಯುತ್ತರ : **(ಕೀರ್ತನೆ 103:8–18)**

ಪಾಲಕ : ಯೆಹೋವನು ಕನಿಕರವೂ ದಯೆಯೂ ದೀರ್ಘಶಾಂತಿಯೂ ಪೂರ್ಣಪ್ರೀತಿಯೂ ಉಳ್ಳವನು. ಆತನು ಯಾವಾಗಲೂ ತಪ್ಪು ಹುಡುಕುವವನಲ್ಲ; ನಿತ್ಯವೂ ಕೋಪಿಸುವವನಲ್ಲ.

ಸಭೆ : **ಕರ್ತನು ನಾವು ಧೂಳಿಯಾಗಿದ್ದೇವೆಂಬದನ್ನು ನೆನಪು ಮಾಡಿಕೊಳ್ಳುತ್ತಾನೆ.**

ಪಾಲಕ : ಆತನು ನಮ್ಮ ಪಾಪಗಳಿಗೆ ಸರಿಯಾಗಿ ನಮ್ಮನ್ನು ಶಿಕ್ಷಿಸಲಿಲ್ಲ; ನಮ್ಮ ಅಪರಾಧಗಳಿಗೆ ತಕ್ಕಂತೆ ದಂಡಿಸಲಿಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ಆತನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ಕೃಪೆಯು ಅಷ್ಟು ಅಪಾರವಾಗಿದೆ.

ಸಭೆ : **ಕರ್ತನು ನಾವು ಧೂಳಿಯಾಗಿದ್ದೇವೆಂಬದನ್ನು ನೆನಪು ಮಾಡಿಕೊಳ್ಳುತ್ತಾನೆ.**

ಪಾಲಕ : ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ ನಮ್ಮ ದ್ರೋಹಗಳನ್ನು ನಮ್ಮಿಂದ ತೆಗೆದು ಅಷ್ಟು ದೂರ ಮಾಡಿದ್ದಾನೆ.

ಸಭೆ : **ಕರ್ತನು ನಾವು ಧೂಳಿಯಾಗಿದ್ದೇವೆಂಬದನ್ನು ನೆನಪು ಮಾಡಿಕೊಳ್ಳುತ್ತಾನೆ.**

ಪಾಲಕ : ತಂದೆಯು ಮಕ್ಕಳನ್ನು ಕನಿಕರಿಸುವಂತೆ ಯೆಹೋವನು ತನ್ನಲ್ಲಿ ಭಯ–ಭಕ್ತಿಯುಳ್ಳವರನ್ನು ಕನಿಕರಿಸುತ್ತಾನೆ. "ನಾವು ಧೂಳಿಯಾಗಿದ್ದೇವೆಂಬದನ್ನು ನೆನಪು ಮಾಡಿಕೊಳ್ಳುತ್ತಾನೆ". (ಆತನು ನಮ್ಮ ಪ್ರಕೃತಿಯನ್ನು ಬಲ್ಲನು.)

ಸಭೆ : ಕರ್ತನು ನಾವು ಧೂಳಿಯಾಗಿದ್ದೇವೆಂಬದನ್ನು ನೆನಪು ಮಾಡಿಕೊಳ್ಳುತ್ತಾನೆ.

ಪಾಲಕ : ಆದರೆ ಯೆಹೋವನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ದಯವು ಯುಗಯುಗಾಂತರಗಳ ವರೆಗೂ ಇರುತ್ತದೆ. ಆತನ ನಿಬಂಧನೆಗಳನ್ನು ಕೈಕೊಂಡು ಆತನ ಎಧಿಗಳನ್ನು ನೆನಪಿನಲ್ಲಿಟ್ಟುಕೊಂಡು ನಡೆಯುವವರ ಮಕ್ಕಳು ಮೊಮ್ಮಕ್ಕಳ ವರೆಗೂ ಆತನು ತನ್ನ ನೀತಿಯನ್ನು ಸಾಧಿಸುವನು.

ಸಭೆ : ಕರ್ತನು ನಾವು ಧೂಳಿಯಾಗಿದ್ದೇವೆಂಬದನ್ನು ನೆನಪು ಮಾಡಿಕೊಳ್ಳುತ್ತಾನೆ. ಆಮೆನ್

ಪ್ರಾರ್ಥನೆ :

ಪಾಲಕ : ಸರ್ವಶಕ್ತನೂ ಪ್ರೀತಿಸ್ವರೂಪನೂ ಆದ ದೇವರೇ, ನಮ್ಮೆಲ್ಲರ ಸೃಷ್ಟಿಕರ್ತನಾಗಿರುವ ನಿನ್ನ ಬಳಿಗೆ, ನಿನ್ನ ಮಕ್ಕಳಾದ ನಾವು ಧೀನತೆಯಿಂದ ಬರುತ್ತೇವೆ. ನಾವು ನಮ್ಮ ಮಾತುಗಳು ಮೂಲಕ, ಕಾರ್ಯಗಳ ಮೂಲಕ, ನಮ್ಮ ಆಲೋಚನೆಗಳ ಮೂಲಕ ಪಾಪ ಮಾಡಿದ್ದೇವೆ. ನೀನು ನಮ್ಮಲ್ಲಿ ಇರುವಿ ಎನ್ನುವ ನಂಬಿಕೆಯಲ್ಲಿ ನಮ್ಮ ಕರೆಗೆ ಯೋಗ್ಯರಾಗಿ ಜೀವಿಸುವಂತೆ ನಮ್ಮನ್ನು ಎಚ್ಚರಿಸು. "ನಿನ್ನ ಕರುಣೆಯಿಂದ, ನಮ್ಮನ್ನು ನಮ್ಮ ಪಾಪಗಳಿಂದ ಬಿಡುಗಡೆಗೊಳಿಸೆಂದು (ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ)" ತಂದೆಯೊಂದಿಗೂ ಪವಿತ್ರಾತ್ಮನೊಂದಿಗೂ ಕೂಡಿ ಸದಾ ಜೀವಿಸಿ ಆಳುವ ನಿನ್ನಲ್ಲಿ ಬೇಡಿಕೊಳ್ಳುತ್ತೇವೆ. ಆಮೆನ್

ಪಾಪದರಿಕೆಗೆ ಕರೆ :

ಪಾಲಕ : ಪ್ರಿಯರೇ, ನಾವು ಕ್ಷಣಕಾಲ ದೇವರ ಪವಿತ್ರ ಸಮಕ್ಷಮದಲ್ಲಿ ಮೌನವಾಗಿದ್ದು ನಮ್ಮನ್ನು ಪರೀಕ್ಷಿಸಿಕೊಳ್ಳೋಣ.

ಮೌನ

ಸಭೆ : (ಹಾಡುವುದು) ಬನ್ನಿ, ಪಶ್ಚಾತ್ತಾಪದಿಂದ.....

ಪಾಪದರಿಕೆ :

ಪಾಲಕ : ಕ್ರಿಸ್ತನು ಸೇವೆ ಮಾಡಿದಂತೆ, ನಾವು ಸೇವೆ ಮಾಡುವುದರಲ್ಲಿ, ನೀನು ನಮಗೆ ಕೊಟ್ಟ ಕರೆಗೆ ನಾವು
ನಾವು ಕ್ರಿಸ್ತನಲ್ಲಿದ್ದ ಮನಸ್ಸನ್ನು ಧರಿಸಿಕೊಳ್ಳಿಲಿಲ್ಲ. ನಿನ್ನ ಪವಿತ್ರಾತ್ಮನನ್ನು ನೋಯಿಸಿದ್ದೇವೆ.

ಸಭೆ : ಕರ್ತನೇ, ನಮ್ಮ ಮೇಲೆ ಕರುಣೆಯಿಡು.

ಪಾಲಕ : ಕರ್ತನೇ, ನಮ್ಮ ಜೀವನದಲ್ಲಿದ್ದ ಅಸಹನೆ, ಕಪಟತನ, ಅಹಂ, ಮತ್ತು ಎಲ್ಲ ಅಪನಂಬಗಸ್ತಿಗಾಗಿ ನಿನ್ನಲ್ಲಿ ಅರಿಕೆ ಮಾಡುತ್ತೇವೆ.

ಸಭೆ : ಕರ್ತನೇ, ನಮ್ಮ ಮೇಲೆ ಕರುಣೆಯಿಡು.

ಪಾಲಕ : ನಮ್ಮ ಸ್ವಾರ್ಥ ಮನೋಭಾವನೆ ಮತ್ತು ಕಾರ್ಯಗಳಿಗಾಗಿ, ಇತರರನ್ನು ನೋಯಿಸಿರುವುದಕ್ಕಾಗಿ ನಿನ್ನಲ್ಲಿ ಅರಿಕೆ ಮಾಡುತ್ತೇವೆ.

ಸಭೆ : ಕರ್ತನೇ, ನಮ್ಮ ಮೇಲೆ ಕರುಣೆಯಿಡು.

ಪಾಲಕ : ನಮ್ಮದೇ ಆದ ಒತ್ತಡಗಳಿಂದ ನಮ್ಮ ಕೋಪ ಮತ್ತು ಇತರರ ಕಡೆಗೆ ನಮ್ಮ ದ್ವೇಷ ಇವುಗಳಿಗಾಗಿ ನಿನ್ನಲ್ಲಿ ಅರಿಕೆ ಮಾಡುತ್ತೇವೆ.

ಸಭೆ : ಕರ್ತನೇ, ನಮ್ಮ ಮೇಲೆ ಕರುಣೆಯಿಡು.

ಪಾಲಕ : ಲೌಕಿಕವಾಗಿ ಆಶಾಪಾಶಗಳ ಕಡೆಗೆ ನಮ್ಮ ಅಪರಿಮಿತವಾಗಿ ಪ್ರೀತಿ ಮತ್ತು ನಮ್ಮ ದೈನಂದಿನ ಜೀವನ ಮತ್ತು ಕೆಲಸದಲ್ಲಿನ ನಮ್ಮ ಅಪನಂಬಿಕಾಸ್ತಿಕೆಗಾಗಿ ನಿನ್ನಲ್ಲಿ ಅರಿಕೆ ಮಾಡುತ್ತೇವೆ.

ಸಭೆ : ಕರ್ತನೇ, ನಮ್ಮ ಮೇಲೆ ಕರುಣೆಯಿಡು.

ಪಾಲಕ : ನಮ್ಮ ಆರಾಧನೆ ಮತ್ತು ಪ್ರಾರ್ಥನೆಗಳಲ್ಲಿನ ನಮ್ಮ ಆಲಸ್ಯತನ ಮತ್ತು ನಮ್ಮ ನಂಬಿಕೆಯನ್ನು ಕಾಪಾಡುವಲ್ಲಿ ನಮ್ಮ ವೈಫಲ್ಯತೆಗಾಗಿ ನಾವು ನಿನ್ನಲ್ಲಿ ಅರಿಕೆ ಮಾಡುತ್ತೇವೆ.

ಸಭೆ : ಕರ್ತನೇ, ನಮ್ಮ ಮೇಲೆ ಕರುಣೆಯಿಡು.

ಪಾಲಕ : ಕರ್ತನೇ, ನಮ್ಮ ಪಾಪಗಳಿಗಾಗಿ ಪಶ್ಚತ್ತಾಪದಿಂದ ನಿನ್ನ ಬಳಿಗೆ ಬಂದಿರುವ ನಮ್ಮನ್ನು ಸ್ವೀಕರಿಸು. ನಮ್ಮ ಸಹ ಮಾನವರ ಕಷ್ಟಗಳಲ್ಲಿ ಅವರ ಅಗತ್ಯತೆಗಳನ್ನು ಪೂರೈಸುವಲ್ಲಿ ಮತ್ತು ಅನ್ಯಾಯ ಹಾಗೂ ಅಕ್ರಮ ಕಾರ್ಯಗಳ ಕಡೆಗಿನ ನಮ್ಮ ಅಂಧತೆಗಾಗಿ, ನಮ್ಮ ಧೋರಣೆಗಳಿಗಾಗಿ ನಿನ್ನಲ್ಲಿ ಅರಿಕೆ ಮಾಡುತ್ತೇವೆ.

ಸಭೆ : ಕರ್ತನೇ, ನಮ್ಮ ಪಶ್ಚತ್ತಾಪವನ್ನು ಅಂಗೀಕರಿಸು.

ಪಾಲಕ : ನಮ್ಮ ನೆರೆಹೊರೆಯವರ ಮೇಲೆ ನಾವು ಮಾಡಿದ ಸುಳ್ಳು ತೀರ್ಪಿಗಾಗಿ, ಅವರ ಕಷ್ಟಗಳಲ್ಲಿ ಸ್ಪಂದಿಸದ ನಮ್ಮ ಮನೋಭಾವನೆಗಳಿಗಾಗಿ, ಮತ್ತು ನಮ್ಮ ಪೂರ್ವಕಲ್ಪಿತ ಆಲೋಚನೆಗಳಿಗಾಗಿ ಮತ್ತು ನಮ್ಮಿಂದ ಭಿನ್ನವಾಗಿರುವವರೆಡೆಗಿನ ನಮ್ಮ ತಿರಸ್ಕೃತ ಭಾವನೆಗಳಿಗಾಗಿ ನಿನ್ನಲ್ಲಿ ಅರಿಕೆ ಮಾಡುತ್ತೇವೆ.

ಸಭೆ : ಕರ್ತನೇ, ನಮ್ಮ ಪಶ್ಚತ್ತಾಪವನ್ನು ಅಂಗೀಕರಿಸು.

– ಮೌನ –

ಸಭೆ : (ಹಾಡುವುದು) ಆದಿಕರ್ತ ಕ್ರಿಸ್ತನೇ,

ಪಾಲಕ : ನನ್ನ ಯೌವನದ ಪಾಪಗಳನ್ನು, ದ್ರೋಹಗಳನ್ನು ನಿನ್ನ ನೆನಪಿನಲ್ಲಿಟ್ಟುಕೊಳ್ಳದೆ, ನಿನ್ನ ಒಳ್ಳೆಯತನದಲ್ಲಿ ನನ್ನನ್ನು ನೆನಸಿಕೋ.

ಸಭೆ : **ಕರ್ತನೇ, ನಮ್ಮ ಮೇಲೆ ದಯೆಯಿಡು.**

ಪಾಲಕ : ನನ್ನ ಆತ್ಮವನ್ನು ರಕ್ಷಿಸಿ ನನ್ನನ್ನು ಕಾಪಾಡು. ನನ್ನನ್ನು ಆಶಾಭಂಗಪಡಿಸಬೇಡ. ನಾನು ನಿನ್ನಲ್ಲಿಯೇ ಭರವಸವಿಟ್ಟಿದ್ದೇನೆ.

ಸಭೆ : **ಕರ್ತನೇ, ನಮ್ಮ ಮೇಲೆ ದಯೆಯಿಡು.**

ಪಾಲಕ : ಸರ್ವಶಕ್ತನಾದ ದೇವರೇ, ಪಾಪಿಗಳನ್ನು ರಕ್ಷಿಸುವುದಕ್ಕಾಗಿ ನಿನ್ನ ಮಗನನ್ನೇ ಈ ಲೋಕಕ್ಕೆ ಕಳುಹಿಸಿಕೊಟ್ಟೆಯಲ್ಲಾ! ನಿನ್ನ ಬಳಿಗೆ ನಮ್ಮನ್ನು ನಡಿಸು, ನಮ್ಮ ಪಾಪಗಳನ್ನು ಕ್ಷಮಿಸು. ಯೇಸು ಕ್ರಿಸ್ತನ ಮೂಲಕ ನಮ್ಮನ್ನು ನಿತ್ಯ ಜೀವಕ್ಕೆ ಸೇರಿಸು.

ಸಭೆ : **ಆಮೆನ್**

ಸಭೆ : **(ಹಾಡುವುದು) ದೇವರು ನೇಮಿಸಿದಂಥ ಕುರಿಮರಿಯೇ, ಲೋಕ ಪಾಪ–ಪರಿಹಾರಕನೇ, ಕರುಣಿಸೆಮ್ಮನು**

ದೇವರು ನೇಮಿಸಿದಂಥ ಕುರಿಮರಿಯೇ, ಲೋಕ ಪಾಪಪರಿಹಾರಕನೇ, ಕರುಣಿಸೆಮ್ಮನು

ದೇವರು ನೇಮಿಸಿದಂಥ ಕುರಿಮರಿಯೇ, ಲೋಕ ಪಾಪಪರಿಹಾರಕನೇ, ನಿನ್ನ ಶಾಂತಿ ದಯಪಾಲಿಸು.

ಕಾಣಿಕೆ ಸಮರ್ಪಣೆ : ಕೀರ್ತನೆ

ಪ್ರಾರ್ಥನೆ :

ದೈವಾಶೀರ್ವಾದ :

ಮುಕ್ತಾಯದ ಸಂಗೀತ :

ಕ್ರಿಸ್ತನ ಶ್ರಮ–ಮರಣಗಳ ಧ್ಯಾನದ ಆರಾಧನಾ ಕ್ರಮ

ಆರಾಧನೆಗೆ ಕರೆ :

ಪಾಲಕ : ನಮ್ಮ ವಿಮೋಚಕನಾದ ಕರ್ತನು ನಿಮ್ಮೊಂದಿಗಿರಲಿ.

ಸಭೆ : **ನಿನ್ನಾತ್ಮದೊಂದಿಗೂ ಇರಲಿ.**

ಪಾಲಕ : ನಮ್ಮ ವಿಮೋಚಕನಾದ ದೇವರೇ, ಪಶ್ಚತ್ತಾಪದ ಹೃದಯದಿಂದ ನಿನ್ನ ಸನ್ನಿಧಿಗೆ ಬರುತ್ತೇವೆ. ನಮ್ಮನ್ನು ನಮ್ಮ ಪಾಪಗಳಿಂದಲೂ ದುಷ್ಟತ್ವದ ಬಂಧನದಿಂದಲೂ ವಿಮೋಚಿಸು. ಈ ಪವಿತ್ರ ದಿನದಲ್ಲಿ ನಿನ್ನ ವಾಕ್ಯವು ನಮ್ಮಲ್ಲಿರುವ ಅಂಧಕಾರವನ್ನು ನೀಗಿಸಲಿ. ಮತ್ತು ಇತರಿಗಾಗಿ ಬೆಳಗುವಂತ ದೀಪಗಳಾಗುವಂತೆ ನಿನ್ನ ವಾಕ್ಯವು ನಮ್ಮನ್ನು ಬೆಳಗಿಸಲಿ. ಆಮೆನ್

ಸಂಗೀತ :

ಪಾಲಕ : ಪ್ರಿಯರೇ, ದೇವರ ಪರಿಶುದ್ಧ ಸನ್ನಿಧಿಯಲ್ಲಿ, ಆತನ ಸಾನಿಧ್ಯಕ್ಕೆ ನಮ್ಮನ್ನು ಸೇರಿಸುವ ಆತನ ಸ್ವರವನ್ನು ನಾವು ಆಲಿಸೋಣ.

– ಮೌನ –

ಉತ್ತರ ಪ್ರತ್ಯುತ್ತರ : ಕೀರ್ತನೆ 46 | ಕೀರ್ತನೆ 53 | ಕೀರ್ತನೆ 55

– ಮೌನ –

ಪಾಲಕ : ತಂದೆ, ಮಗ, ಪರಿಶುದ್ಧಾತ್ಮಗೆ;

ಸಭೆ : **ಆದಿಯಲ್ಲಿದಂತೆಯೇ, ಈಗಲೂ ಯಾವಾಗಲೂ ಮಹಿಮೆಯಾಗಲಿ. ಆಮೆನ್**

ಪಾಪದರಿಕೆಗೆ ಕರೆ :

ಪಾಲಕ : ಪ್ರಿಯರೇ, ಕ್ರಿಸ್ತನ ಶ್ರಮ–ಮರಣಗಳ ಈ ಪಾವನ ದಿವಸಗಳಲ್ಲಿ, ದೇವರ ಪರಿಶುದ್ಧ ಸನ್ನಿಧಿಯಲ್ಲಿ ಕ್ಷಣಕಾಲ ಮೌನವಾಗಿದ್ದು ನಮ್ಮನ್ನು ಪರೀಕ್ಷಿಸಿಕೊಳ್ಳೋಣ.

– ಮೌನ –

ಸಭೆ : (ಹಾಡುವುದು) ಬನ್ನಿ ಪಶ್ಚತ್ತಾಪದಿಂದ,

– ಮೌನ –

ಪಾಪದರಿಕೆ :

ಪಾಲಕ : ಸರ್ವಶಕ್ತನಾದ ದೇವರೇ, ನಿನಗೆ ಎಲ್ಲಾ ಹೃದಯಗಳು ಬಟ್ಟ–ಬಯಲಾಗಿವೆ. ಎಲ್ಲಾ ಆಶೆಗಳು ಗೊತ್ತಾಗಿವೆ, ನಿನಗೆ ತಿಳಿಯದ ಗುಟ್ಟು ಒಂದೂ ಇಲ್ಲ; ನಾವು ನಿನ್ನನ್ನು ಯಥಾರ್ಥವಾಗಿ ಪ್ರೀತಿಸುವಂತೆಯೂ ನಿನ್ನ ಪವಿತ್ರ ನಾಮವನ್ನು ಯೋಗ್ಯವಾಗಿ ಘನಪಡಿಸುವಂತೆಯೂ ನಮ್ಮ ಹೃದಯದ ಯೋಚನೆಗಳನ್ನು ನಿನ್ನ ಪವಿತ್ರಾತ್ಮನ ಪ್ರೇರಣೆಯಿಂದ ಶುದ್ಧೀಕರಿಸಬೇಕೆಂದು ನಮ್ಮ ಕರ್ತನಾದ ಕ್ರಿಸ್ತನ ಮುಖಾಂತರ ನಿನ್ನನ್ನು ಬೇಡಿಕೊಳ್ಳುತ್ತೇವೆ. ಆಮೆನ್

ಸಭೆ : ಕರುಣೆಯುಳ್ಳ ದೇವರೇ, ನಮ್ಮ ಸ್ವಾರ್ಥ ಮತ್ತು ಚಿಂತನೆಯಿಲ್ಲದ ನಮ್ಮ ನಡೆ–ನುಡಿಗಳಿಂದ ನಮ್ಮನ್ನು ಕಾಪಾಡು. ನಮ್ಮ ಜೀವನದಲ್ಲಿ, ನಿನ್ನ ವಾಕ್ಯಕ್ಕೆ ಅನುಗುಣವಾಗಿ, ಜೀವಿಸುವುದರಲ್ಲಿ ನಾವು ವಿಫಲರಾಗಿದ್ದೇವೆ. ನಿನಗೆ ಸಾಕ್ಷಿಯನ್ನು ತರುವಂತ ಜೀವಿತವನ್ನು ನಾವು ಜೀವಿಸುವುದರಲ್ಲಿ ವಿಫಲರಾಗಿದ್ದೇವೆ. ದಯವಿಟ್ಟು ನಮ್ಮ ಮೇಲೆ ದಯವಿಡು. ಯಾಕೆಂದರೆ ನಾವು ನಿನ್ನ ದೃಷ್ಟಿಯಲ್ಲಿ ಪಾಪಿಗಳಾಗಿದ್ದೇವೆ. ನಿನ್ನ ಅಪಾರವಾದ ಕರುಣೆಯಿಂದ ನಮ್ಮ ಪಾಪಗಳಿಂದ ನಮ್ಮನ್ನು ಶುದ್ಧೀಕರಿಸಿ ನಿತ್ಯ ಜೀವಕ್ಕೆ ಸೇರಿಸೆಂದು ಬೇಡುತ್ತೇವೆ. ಆಮೆನ್

– ಮೌನ –

ಸಭೆ : (ಹಾಡುವುದು) ಆದಿಕರ್ತ ಕ್ರಿಸ್ತನೇ...

ಪಾಪ ಕ್ಷಮಾಪಣೆ :

ಪಾಲಕ : ಸರ್ವಶಕ್ತನೂ ಕರುಣಾಳೂ ಆದ ದೇವರು ತಾನೇ ನಿಮ್ಮ ಪಾಪಗಳನ್ನು ಕ್ಷಮಿಸಿ ಅವುಗಳಿಂದ ನಿಮ್ಮನ್ನು ಬಿಡಿಸಿ ಕಾಪಾಡಲಿ.

ವೇದ ಪಾರಾಯಣ :

ಸಂಗೀತ / ಕೀರ್ತನೆ :

ಪ್ರಸಂಗ :

ಅಪೊಸ್ತಲರ ವಿಶ್ವಾಸ ಸೂತ್ರ :

ಸಮರ್ಪಣೆಯ ಪ್ರಾರ್ಥನೆ :

ಪಾಲಕ : ಕರುಣೆ ಮತ್ತು ಕ್ಷಮೆ ನಮ್ಮ ದೇವರಿಗೆ ಸೇರಿದ್ದು. ನಾವು ಆತನಿಗೆ ತಿರುಗಿ ಬಿದ್ದಾಗ್ಯೂ, ನಮ್ಮ ಅವಿಧೇಯತೆಯನ್ನು ಅರಿಕೆ ಮಾಡಿ ಆತನ ಕರುಣೆಗಾಗಿ ಆತನಲ್ಲಿ ಬೇಡಿಕೊಳ್ಳೋಣ.

ಪಾಲಕ : ನಮ್ಮ ಸಹಾಯವು ನಮ್ಮ ಕರ್ತನ ನಾಮದಲ್ಲಿದೆ.

ಸಭೆ : ಭೂಮಿ ಆಕಾಶವನ್ನು ಉಂಟು ಮಾಡಿದವನು ಆತನೇ.

ಪಾಲಕ : ನಾನು ನನ್ನ ಪಾಪಗಳನ್ನು ಅರಿಕೆ ಮಾಡುವೆನೆಂದು ಹೇಳುವೆನು.

ಸಭೆ : ನೀನು ನನ್ನ ಪಾಪಗಳನ್ನು ಮನ್ನಿಸುವಿ.

ಪಾಲಕ : ಕರ್ತನೇ, ನಿನ್ನ ನಿರಂತರವಾದ ಪ್ರೀತಿಯನ್ನು, ಕರುಣೆಯನ್ನು ನಿನ್ನ ನೆನಪಿಗೆ ತಂದುಕೋ.

ಸಭೆ : ಕರ್ತನೇ, ನಮ್ಮ ಮೇಲೆ ದಯೆಯಿಡು.

ಪಾಲಕ : ಪ್ರಿಯರೇ, ಕ್ರಿಸ್ತನ ಶ್ರಮ–ಮರಣಗಳ ಈ ಪಾವನ ದಿವಸಗಳಲ್ಲಿ, ದೇವರ ಪರಿಶುದ್ಧ ಸನ್ನಿಧಿಯಲ್ಲಿ ಕ್ಷಣಕಾಲ ಮೌನವಾಗಿದ್ದು ನಮ್ಮನ್ನು ಪರೀಕ್ಷಿಸಿಕೊಳ್ಳೋಣ.

– ಮೌನ –

ಸಭೆ : (ಹಾಡುವುದು) ಬನ್ನಿ ಪಶ್ಚತ್ತಾಪದಿಂದ,

– ಮೌನ –

ಪಾಪದರಿಕೆ :

ಪಾಲಕ : ಸರ್ವಶಕ್ತನಾದ ದೇವರೇ, ನಿನಗೆ ಎಲ್ಲಾ ಹೃದಯಗಳು ಬಟ್ಟ–ಬಯಲಾಗಿವೆ. ಎಲ್ಲಾ ಆಶೆಗಳು ಗೊತ್ತಾಗಿವೆ, ನಿನಗೆ ತಿಳಿಯದ ಗುಟ್ಟು ಒಂದೂ ಇಲ್ಲ; ನಾವು ನಿನ್ನನ್ನು ಯಥಾರ್ಥವಾಗಿ ಪ್ರೀತಿಸುವಂತೆಯೂ ನಿನ್ನ ಪವಿತ್ರ ನಾಮವನ್ನು ಯೋಗ್ಯವಾಗಿ ಘನಪಡಿಸುವಂತೆಯೂ ನಮ್ಮ ಹೃದಯದ ಯೋಚನೆಗಳನ್ನು ನಿನ್ನ ಪವಿತ್ರಾತ್ಮನ ಪ್ರೇರಣೆಯಿಂದ ಶುದ್ಧೀಕರಿಸಬೇಕೆಂದು ನಮ್ಮ ಕರ್ತನಾದ ಕ್ರಿಸ್ತನ ಮುಖಾಂತರ ನಿನ್ನನ್ನು ಬೇಡಿಕೊಳ್ಳುತ್ತೇವೆ. ಆಮೆನ್

ಸಭೆ : ಕರುಣೆಯುಳ್ಳ ದೇವರೇ, ನಮ್ಮ ಸ್ವಾರ್ಥ ಮತ್ತು ಚಿಂತನೆಯಿಲ್ಲದ ನಮ್ಮ ನಡೆ–ನುಡಿಗಳಿಂದ ನಮ್ಮನ್ನು ಕಾಪಾಡು. ನಮ್ಮ ಜೀವನದಲ್ಲಿ, ನಿನ್ನ ವಾಕ್ಯಕ್ಕೆ ಅನುಗುಣವಾಗಿ, ಜೀವಿಸುವುದರಲ್ಲಿ ನಾವು ವಿಫಲರಾಗಿದ್ದೇವೆ. ನಿನಗೆ ಸಾಕ್ಷಿಯನ್ನು ತರುವಂತ ಜೀವಿತವನ್ನು ನಾವು ಜೀವಿಸುವುದರಲ್ಲಿ ವಿಫಲರಾಗಿದ್ದೇವೆ. ದಯವಿಟ್ಟು ನಮ್ಮ ಮೇಲೆ ದಯವಿಡು. ಯಾಕೆಂದರೆ ನಾವು ನಿನ್ನ ದೃಷ್ಟಿಯಲ್ಲಿ ಪಾಪಿಗಳಾಗಿದ್ದೇವೆ. ನಿನ್ನ ಅಪಾರವಾದ ಕರುಣೆಯಿಂದ ನಮ್ಮ ಪಾಪಗಳಿಂದ ನಮ್ಮನ್ನು ಶುದ್ಧೀಕರಿಸಿ ನಿತ್ಯ ಜೀವಕ್ಕೆ ಸೇರಿಸೆಂದು ಬೇಡುತ್ತೇವೆ. ಆಮೆನ್

– ಮೌನ –

ಸಭೆ : (ಹಾಡುವುದು) ಆದಿಕರ್ತ ಕ್ರಿಸ್ತನೇ...

ಪಾಪ ಕ್ಷಮಾಪಣೆ :

ಪಾಲಕ : ಸರ್ವಶಕ್ತನೂ ಕರುಣಾಳೂ ಆದ ದೇವರು ತಾನೇ ನಿಮ್ಮ ಪಾಪಗಳನ್ನು ಕ್ಷಮಿಸಿ ಅವುಗಳಿಂದ ನಿಮ್ಮನ್ನು ಬಿಡಿಸಿ ಕಾಪಾಡಲಿ.

ವೇದ ಪಾರಾಯಣ :

ಸಂಗೀತ / ಕೀರ್ತನೆ :

ಪ್ರಸಂಗ :

ಅಪೊಸ್ತಲರ ವಿಶ್ವಾಸ ಸೂತ್ರ :

ಸಮರ್ಪಣೆಯ ಪ್ರಾರ್ಥನೆ :

ಪಾಲಕ : ಕರುಣೆ ಮತ್ತು ಕ್ಷಮೆ ನಮ್ಮ ದೇವರಿಗೆ ಸೇರಿದ್ದು. ನಾವು ಆತನಿಗೆ ತಿರುಗಿ ಬಿದ್ದಾಗ್ಯೂ, ನಮ್ಮ ಅವಿಧೇಯತೆಯನ್ನು ಅರಿಕೆ ಮಾಡಿ ಆತನ ಕರುಣೆಗಾಗಿ ಆತನಲ್ಲಿ ಬೇಡಿಕೊಳ್ಳೋಣ.

ಪಾಲಕ : ನಮ್ಮ ಸಹಾಯವು ನಮ್ಮ ಕರ್ತನ ನಾಮದಲ್ಲಿದೆ.

ಸಭೆ : ಭೂಮಿ ಆಕಾಶವನ್ನು ಉಂಟು ಮಾಡಿದವನು ಆತನೇ.

ಪಾಲಕ : ನಾನು ನನ್ನ ಪಾಪಗಳನ್ನು ಅರಿಕೆ ಮಾಡುವೆನೆಂದು ಹೇಳುವೆನು.

ಸಭೆ : ನೀನು ನನ್ನ ಪಾಪಗಳನ್ನು ಮನ್ನಿಸುವಿ.

ಪಾಲಕ : ಕರ್ತನೇ, ನಿನ್ನ ನಿರಂತರವಾದ ಪ್ರೀತಿಯನ್ನು, ಕರುಣೆಯನ್ನು ನಿನ್ನ ನೆನಪಿಗೆ ತಂದುಕೋ.

ಸಭೆ : ಕರ್ತನೇ, ನಮ್ಮ ಮೇಲೆ ದಯೆಯಿಡು.